ಅಧ್ಯಕ್ಷರು : ಈ ತರಹ ಎಷ್ಟೋ ಪ್ರಕರಣಗಳಲ್ಲಿ ಈ ರೀತಿ ಆಗಿದೆ. ತಾವುಗಳು ಈ ರೀತಿ ಮಾಡುವುದು ಸರಿಯಲ್ಲ ತಾವು ವಿರೋಧ ಪಕ್ಷದ ನಾಯಕರಾಗಿ ಈ ರೀತಿ ಹೋಗುವುದು ಸರಿಯಲ್ಲ. ನೀವು ಮಾಜಿ ಮುಖ್ಯಮಂತ್ರಿಗಳು ಈ ರೀತಿ ಹೋಗುವುದು ಸರಿಯಲ್ಲ ದಯಮಾಡಿ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ನಿಮಗೂ ಕೂಡ ಇದು ಅವಮಾನ. ತಾವೂ ಕೂಡ ಎದ್ದು ಬರಬೇಕು.

ಅಧ್ಯಕ್ಷರು : ತಾವುಗಳು ಕುಳಿತುಕೊಳ್ಳಿ. ಅವರುಗಳು ಬರುತ್ತಾರೆ,

(ಗೊಂದಲ)

ಅಧ್ಯಕ್ಷರು: ಮಾನ್ಯ ಯಡಿಯೂರಪ್ಪನವರನ್ನು ಕರೆಸಿ. ಅರ್ಥ ಮಂತ್ರಿಗಳು ಇರಬೇಕಾಗಿತ್ತು. Taha too ಲೀಡರ್ ಆಫ್ ಅಪೋಜಿಷನ್ ಮಾತನಾಡುವಾಗ ಅವರು ಇರಬೇಕು. ಈಗ ಹತ್ತು ನಿಮಿಷಗಳ ಕಾಲ ಸಭೆಯನ್ನು ಮುಂದೂಡುತ್ತಿದ್ದೇನೆ. ಅರ್ಥಮಂತ್ರಿಗಳು ಎಲ್ಲರನ್ನೂ ಕರೆಸಿ. ಬೇರೆ ಸಮಯವಾದರೆ ಅದೊಂದು ತರಹ ಅದರಲ್ಲೂ ವಿರೋಧ ಪಕ್ಷದ ನಾಯಕರು ಮಾತನಾಡುವಾಗ ಮಂತ್ರಿಗಳು ಇರಬೇಕು.

(ಸದನವು 3-24 ಗಂಟೆಗೆ ಮುಂದೂಡಲ್ಪಟ್ಟು ಹತ್ತು ನಿಮಿಷಗಳ ನಂತರ ಸಮಾವೇಶಗೊಳ್ಳಲು ನಿರ್ಧರಿಸಿತು)

(ಸದನವು 4-57ಕ್ಕೆ ಸಮಾವೇಶಗೊಂಡಿತು)

(ಅಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಅಧ್ಯಕ್ಷರು : ಈಗ ಸದನವನ್ನು ನಾಳೆ ಬೆಳಿಗ್ಗೆ 10.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಸಂಜೆ 4 ಗಂಟೆ 57 ನಿಮಿಷಕ್ಕೆ ಮುಂದೂಡಲ್ಪಟ್ಟು ದಿನಾಂಕ 22ನೇ ಮಾರ್ಚ್ 2006ರ ಬುಧವಾರ ಬೆಳಿಗ್ಗೆ 10.00 ಗಂಟೆಗೆ ಸೇರಲು ನಿಶ್ಚಯಿಸಿತು)

ಅನುಬಂಧ-II

(1) (123) ಶ್ರೀ ಅಪ್ಪಸಾಹೇಬ್ (ಅಪ್ಪು) ಮಲ್ಲಪ್ಪ ಪಟ್ಟಣಶೆಟ್ಟಿ (ಬಿಜಾಪುರ): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ವಿಜಾಪುರ ನಗರದಲ್ಲಿರುವ ಆರಕ್ಷಕ ಠಾಣೆ ಹಾಗೂ ಸಂಚಾರಿ ಪೊಲೀಸ್ ಠಾಣೆಗಳ ಸಂಖ್ಯೆ ಎಷ್ಟು ಹಾಗೂ ಅವು ಯಾವುವು?

ಆ) ಜಿಲ್ಲಾ ಕೇಂದ್ರವಾಗಿರುವ ಈ ನಗರದಲ್ಲಿ ಆರಕ್ಷಕ ಠಾಣೆ ಹಾಗೂ ಸಂಚಾರಿ ಪೊಲೀಸ್ ಠಾಣೆಗಳಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ, ಯಾವಾಗ ಮಂಜೂರಾತಿ ನೀಡಲಾಗುವುದು ?

ಈ) ಯಾವ ಯಾವ ಸ್ಥಳಗಳಲ್ಲಿ ಪ್ರಾರಂಭಿಸಲಾಗುವುದು ?

ಶ್ರೀ ಹೆಚ್. ಡಿ. ಕುಮಾರಸ್ವಾಮಿ, ಮಾನ್ಯ ಮುಖ್ಯ ಮಂತ್ರಿಗಳು

ಅ) ವಿಜಾಪುರ ನಗರದಲ್ಲಿ 5 ನಾಗರೀಕ ಪೊಲೀಸ್ ಠಾಣೆಗಳು ಮತ್ತು 1 ಸಂಚಾರಿ ಪೊಲೀಸ್ ಠಾಣೆ ಇರುತ್ತವೆ.

ವಿವರ :

1. ಗಾಂಧಿಚೌಕ ಪೊಲೀಸ್ ಠಾಣೆ
2. ಗೊಲಗುಂಬಜ ಪೊಲೀಸ್ ಠಾಣೆ
3. ಎ.ಪಿ.ಎಂ.ಸಿ. ಪೊಲೀಸ್ ಠಾಣೆ
4. ಆದರ್ಶನಗರ ಪೋಲೀಶ್ ಠಾಣೆ
5. ಬಿಜಾಪುರ ಗ್ರಾಮೀಣ ಪೊಲೀಸ್ ಠಾಣೆ

1. ಬಿಜಾಪುರ ಸಂಚಾರಿ ಪೋಲೀಶ್ ಠಾಣೆ

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಜಲನಗರದಲ್ಲಿ ಹೊಸದಾಗಿ ಪೊಲೀಸ್ ಠಾಣೆ ಸೃಜಿಸುವ ಕುರಿತಂತೆ, ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

(2) (124) ಶ್ರೀ ಅಪ್ಪಸಾಹೇಬ್ (ಅಪ್ಪು) ಮಲ್ಲಪ್ಪ ಪಟ್ಟಣಶೆಟ್ಟಿ (ಬಿಜಾಪುರ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ಬಿಜಾಪುರ ನಗರವು ಜಿಲ್ಲಾ ಕೇಂದ್ರವಾಗಿದ್ದರೂ, ಮಹಿಳೆಯರಿಗಾಗಿ ಪ್ರತ್ಯೇಕ ಮಹಿಳಾ ಪೊಲೀಸ್ ಠಾಣೆಗಳಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಬಿಜಾಪುರದಲ್ಲಿ ಮಹಿಳಾ ಪೊಲೀಸ್ ಠಾಣೆ ಪ್ರಾರಂಭಿಸುವ ಕುರಿತು ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ?

ಇ) ಹಾಗಿದ್ದಲ್ಲಿ, ಯಾವಾಗ ಮತ್ತು ಎಷ್ಟು ಮಹಿಳಾ ಪೊಲೀಸ್ ಠಾಣೆಗಳನ್ನು ಮಂಜೂರು ಮಾಡಲಾಗುವುದು?

ಶ್ರೀ ಹೆಚ್. ಡಿ. ಕುಮಾರಸ್ವಾಮಿ, ಮಾನ್ಯ ಮುಖ್ಯ ಮಂತ್ರಿಗಳು

ಅ) ಇಲ್ಲ.